ಸಂಖ್ಯೆ: ವಅಅ/ಸಂದವ/MML/Conveyor/2018-19

ವಲಯ ಅರಣ್ಯಾಧಿಕಾರಿಗಳ ಕಛೇರಿ
ಸಂಡೂರು ದಕ್ಷಿಣ ವಲಯ ಸಂಡೂರು
ದಿನಾಂಕ: 05/01/2019.

ಇವರಿಗೆ,

ಉಪ ಪ್ರಧಾನ ವ್ಯವಸ್ಥಾಪಕರು
ಮೆ॥ ಎಂಎಂಎಲ್ 2629 (ಸುಬ್ರಾಯನಹಳ್ಳಿ)
ಸಂಡೂರು.

ವಿಷಯ: Diversion 19.898 ha Forest land for pipe line conveyor belt infavour of M/s Mysore Minerals limited, Sandur

ಉಲ್ಲೇಖ: MI/MNG/MML/2629/Conveyor/2018-19 ದಿನಾಂಕ: 18.12.2018.

*****

ಈ ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ, ಮೆ॥ ಎಂ.ಎಂ.ಎಲ್ ಗಣಿಗುತ್ತಿಗೆ ಸಂಖ್ಯೆ: 2629 ಗಣಿಗುತ್ತಿಗೆಗೆ ಸಂಬಂಧಿಸಿದಂತೆ pipe line conveyor belt ನ್ನು ಅರಣ್ಯ ಪ್ರದೇಶದಲ್ಲಿ ನಿರ್ಮಿಸಲು ಮಾನ್ಯ ಉಪ ಅರಣ್ಯ ಸಂರಕ್ಷಣಾಧಿಕಾರಿಗಳು ಬಳ್ಳಾರಿ ವಿಭಾಗ ಬಳ್ಳಾರಿರವರಿಗೆ ನೀವುಗಳು ಪ್ರಸ್ತಾವನೆಯನ್ನು ಸಲ್ಲಿಸಿರುತ್ತೀರಿ.

ಮುಂದುವರೆದು ಉಲ್ಲೇಖಿತ ಪತ್ರದಲ್ಲಿ ಮಾನ್ಯ ಉಪ ಅರಣ್ಯ ಸಂರಕ್ಷಣಾಧಿಕಾರಿಗಳು ಬಳ್ಳಾರಿ ವಿಭಾಗ ಬಳ್ಳಾರಿರವರು ಈ ಕೆಳ ಸಹಿದಾರರಿಗೆ ತಾವುಗಳು ಸಲ್ಲಿಸಿದ ಪ್ರಸ್ತಾವನೆಯನ್ನುಈ ಕಛೇರಿಗೆ ಕಳುಹಿಸಿ ಕಂದಾಯ ಇಲಾಖಾ ಮೋಜಣಿದಾರರು ಮತ್ತು ಗಣಿ ಮತ್ತು ಭೂ ವಿಜ್ಞಾನ ಇಲಾಖೆ ಅಧಿಕಾರಿಗಳೊಂದಿಗೆ ಜಂಟಿ ಮೋಜಣಿ ನಡೆಸಿ ವರದಿಯನ್ನು ಸಹಾಯಕ ಅರಣ್ಯ ಸಂರಕ್ಷಣಾಧಿಕಾರಿಗಳು ಬಳ್ಳಾರಿ ಉಪ ವಿಭಾಗ ಬಳ್ಳಾರಿರವರ ಮುಖಾಂತರ ಸಲ್ಲಿಸಲು ಸೂಚಿಸಿರುತ್ತಾರೆ.

ಮುಂದುವರೆದು ಈ ಬಗ್ಗೆ ಈ ಕೆಳ ಸಹಿದಾರರು ನಿಮಗೆ ದೂರವಾಣಿ ಮುಖಾಂತರ ಜಂಟಿ ಮೋಜಣಿಗೆ ಸೂಕ್ತ ಏರ್ಪಾಡು ಮಾಡಿಕೊಳ್ಳುವಂತೆ ಅಂದರೆ ನಿಮ್ಮ ಪ್ರಸ್ತಾವನೆಯಲ್ಲಿ ನಮೂದಿಸಿರುವ ಡಿಜಿಪಿಎಸ್ ರೀಡಿಂಗ್‌ಗಳನ್ನು ಪರಿಶೀಲಿಸಲು ಗಣಿ ಮತ್ತು ಭೂವಿಜ್ಞಾನ ಇಲಾಖೆಯಿಂದ ಅಧಿಕೃತಗೊಳಿಸಿದ ಮೋಜಣಿದಾರರನ್ನು ಡಿಜಿಪಿಎಸ್ ಉಪಕರಣಗಳೊಂದಿಗೆ ಹಾಜರಾಗುವ ಬಗ್ಗೆ ತಿಳಿಸಲಾಗಿತ್ತು. ಆದಾಗ್ಯೂ ನೀವುಗಳು ಈ ಬಗ್ಗೆ ಇಲ್ಲಿಯವರೆಗು ಮೋಜಣಿದಾರರನ್ನು ನೇಮಿಸಿಕೊಂಡಿರುವ ಬಗ್ಗೆ ಈ ಕೆಳ ಸಹಿದಾರರಿಗೆ ಮಾಹಿತಿ ನೀಡಿರುವುದಿಲ್ಲ. ಹಾಗೂ ದಿನಾಂಕ: 31.12.2018 ರಂದು ಉಪವಲಯ ಅರಣ್ಯಾಧಿಕಾರಿಗಳು ಕ್ಷೇತ್ರ ತಪಾಸಣೆಗೆ ಪ್ರಸ್ತಾಪಿತ ಸ್ಥಳಕ್ಕೆ ಬಂದು ಪರಿಶೀಲಿಸಿದಾಗ ಕನ್ವೇಯರ್ ಬೆಲ್ಟ್ ಪ್ರದೇಶ ಮತ್ತು ಸರ್ವೀಸ್ ರಸ್ತೆಗೆ ಗುರುತಿಸಿದ ಪ್ರದೇಶಗಳನ್ನು ನಿರ್ದಿಷ್ಟವಾಗಿ ಗುರುತಿಸಿಲ್ಲದರ ಬಗ್ಗೆ ಉಪವಲಯ ಅರಣ್ಯಾಧಿಕಾರಿಗಳು ವರದಿ ಸಲ್ಲಿಸಿರುತ್ತಾರೆ.

ಮುಂದುವರೆದು ಮಾನ್ಯ ಸರ್ವೋಚ್ಚ ನ್ಯಾಯಾಲಯದ ಆದೇಶದಂತೆ ಅದಿರು ಸಾಗಿಸಲು ಕನ್ವೇಯರ್ ಬೆಲ್ಟ್ ಅಳವಡಿಸುವ ಕಾರ್ಯವು ಅತೀ ಪ್ರಾಮುಖ್ಯವಾಗಿದ್ದು ನೀವುಗಳು ಪ್ರಸ್ತಾವಣೆಯನ್ನು ಸಲ್ಲಿಸಿದ ನಂತರ ಈ ಬಗ್ಗೆ ಅರಣ್ಯ ಇಲಾಖಾ ಅಧಿಕಾರಿಗಳೊಂದಿಗೆ ಸಂಪರ್ಕ ಸಾಧಿಸಿ ಪ್ರಸ್ತಾವನೆಗೆ ಅವಶ್ಯವಿರುವ ಜಂಟಿ ಮೋಜಣಿ ಮತ್ತು ಇತರೆ ಕಾರ್ಯಗಳನ್ನು ತ್ವರಿತವಾಗಿ ಕಾರ್ಯರೂಪಕ್ಕೆ ತರುವಲ್ಲಿ ನಿರಾಸಕ್ತಿ ತೋರುತ್ತಿರುವುದು ಕಂಡುಬಂದಿರುತ್ತದೆ. ಆದ್ದರಿಂದ ನಿಮಗೆ ಈ ಮೂಲಕ ಸೂಚಿಸುವುದೇನೆಂದರೆ ನೀವುಗಳು ತ್ವರಿತವಾಗಿ ಜಂಟಿ ಮೋಜಣಿಗೆ ಮತ್ತು ಮರಗಳ ಗಣತಿ ಕಾರ್ಯಕ್ಕೆ ಸಹಾಯಕರನ್ನು ಒದಗಿಸುವ ಬಗ್ಗೆ ಸೂಕ್ತ ಏರ್ಪಾಡು ಮಾಡುವಂತೆ ಈ ಮೂಲಕ ಸೂಚಿಸಲಾಗಿದೆ.

ವಲಯ ಅರಣ್ಯಾಧಿಕಾರಿಗಳು
ಸಂಡೂರು ದಕ್ಷಿಣ ವಲಯ
ಸಂಡೂರು

ಪ್ರತಿಯನ್ನು ವಂದನೆಗಳೊಂದಿಗೆ ಮಾನ್ಯ ಉಪ ಅರಣ್ಯ ಸಂರಕ್ಷಣಾಧಿಕಾರಿಗಳು ಬಳ್ಳಾರಿ ವಿಭಾಗ ಬಳ್ಳಾರಿ ರವರಿಗೆ ಮಾಹಿತಿ ಹಾಗೂ ಮುಂದಿನ ಕ್ರಮಕ್ಕಾಗಿ ಸಲ್ಲಿಸಲಾಗಿದೆ.

ವಲಯ ಅರಣ್ಯಾಧಿಕಾರಿಗಳು
ಸಂಡೂರು ದಕ್ಷಿಣ ವಲಯ
ಸಂಡೂರು.